ಒ ಎಸ್ 4/2021 ಪಿ.ಡಬ್ಲ್ಯೂ:1

ಇಂದು ದಿಃ 09.01.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಬಿ ವಕೀಲರಿಂದಃ

ನಿ ಪಿ 3 ಮತ್ತು 4 ರ ದಾಖಲೆಗಳು 2013ನೇ ಸಾಲಿನ ದಾಖಲೆಗಳು ಎಂದರೆ ಸರಿ. ಪ್ರಸ್ತುತ ದಾವಾ ಆಸ್ತಿಯ ಐಟಂ ನಂ.3 ಖಾತೆಯು ನನ್ನ ತಾತ ಮಾದಶೆಟ್ಟಿಯವರ ಹೆಸರಿನಲ್ಲಿ ಮುಂದುವರೆಯುತ್ತಿದೆ. ನನ್ನ ತಾತ ಮಾದಶೆಟ್ಟಿಯವರಿಗೆ 4 ಜನ ಮಕ್ಕಳು ಎಂದರೆ ಸರಿ. ಆದರೆ ಮಾದಶೆಟ್ಟಿ ಮಕ್ಕಳ ನಡುವೆ ಯಾವುದೇ ವಿಭಾಗ ಆಗಿಲ್ಲ. ನನ್ನ ತಂದೆಗೂ ಸಹ ಆಸ್ತಿಯಲ್ಲಿ ವಿಭಾಗ ಆಗಿಲ್ಲ. ನಿಪಿ 2ರ ಪ್ರಕಾರ ಸರ್ವೆ ನಂ.97 ರಲ್ಲಿ 2 ಎಕರೆ 6 ಗುಂಟೆ ಆಸ್ತಿಯು ದೇವಶೆಟ್ಟಿ ಎಂದರೆ ನನ್ನ ಮುತ್ತಾತನ ಹೆಸರಿನಲ್ಲಿ ಇದೆ. ಸರ್ವೆ ನಂ.91/6 ರ ಖಾತೆಯು ಅಂಕಶೆಟ್ಟಿ ಮಗ ಮಾದಶೆಟ್ಟಿ ರವರ ಹೆಸರಿನಲ್ಲಿದೆ ಎಂದರೆ ಸರಿ. ಆದರೆ ಅದು ನನ್ನ ತಾತನ ಹೆಸರಿನಲ್ಲಿ ಇಲ್ಲ. ದಾವಾ ಆಸ್ತಿಗೂ ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಬೇರೆಯವರ ಆಸ್ತಿ ದಾಖಲೆಗಳನ್ನು ಹಾಜರುಪಡಿಸಿ ನನ್ನ ತಂದೆ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಎಂದರೆ ಸರಿ. ಈಗ ಅವರು ಶೆಟ್ಟಹಳ್ಳಿ ಗ್ರಾಮದ ಶಾಲೆಯಲ್ಲಿ 10 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಾನು, ನನ್ನ ಅಕ್ಕ ಮತ್ತು ತಾಯಿ ಹುಲ್ಲಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ. ನನ್ನ ಅಕ್ಕ ಇಂಜಿನಿಯರಿಂಗ್ ಓದಿರುತ್ತಾಳೆ ಆದರೆ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಆರ್ ಎಂ ಸಿ ಯಲ್ಲಿ ಕೂಲಿ ಮಾಡುತ್ತಿದ್ದೇನೆ. ನನ್ನ ತಾಯಿ ಹೆಸರಿನಲ್ಲಿ 407 ಎರಡು ವಾಹನಗಳನ್ನು ನಾನು ಬಾಡಿಗೆಗೆ ಬಿಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ವಾಹನದ ಮೇಲುಸ್ತುವಾರಿಯನ್ನು ನಾನೇ ನೊಡುತ್ತಿದ್ದು ನನ್ನ ಅಕ್ಕ ಇಂಜಿನಿಯರಿಂಗ್ ಕೆಲಸ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ಎಲ್ಲಾ ಮೂಲಗಳಿಂದ ನಮ್ಮ ಕುಟುಂಬಕ್ಕೆ ರೂ.2,50,000/- ಆದಾಯವಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಮಧುಮೇಹ ಖಾಯಿಲೆಗೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರೆ ಸುಳ್ಳು. ನನ್ನ ತಂದೆಯ ತಂದೆ ಮನೆ ಕಡಬೂರು ಆಗಿದ್ದು, ಅವರು ಅಲ್ಲಿ ವಾಸವಾಗಿದ್ದು ಖಾಯಿಲೆಯಿಂದ ಬಳಲುತ್ತಿದ್ದು ಅವರು ಯಾವುದೇ ಕೆಲಸ ಮಾಡುತ್ತಿಲ್ಲ ಮತ್ತು ಅವರಿಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸುಳ್ಳು. ನನ್ನ ತಂದೆಗೆ ಖಾಯಿಲೆ ಇರುವ ಕಾರಣ ಅವರನ್ನು ಅವರ ಊರಿನಲ್ಲಿ ಬಿಟ್ಟು ನಾವು ಪ್ರತ್ಯೇಕ ವಾಸ ಇದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ವಿರುದ್ದ ನಾನು ವರದಕ್ಷಿಣೆ ಕಿರುಕುಳದ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ ಆದರೆ ನನ್ನ ತಂದೆಯ ಬಳಿ ಹೋಗಿ ಪಾಲು ಕೇಳಿದ್ದೆವು ಆದರೆ ಅವರು ಕೊಡುವುದಿಲ್ಲ ಎಂದು

ಹೇಳಿದ್ದರು. ಆ ಕುರಿತು ಹುಲ್ಲಹಳ್ಳಿಯ ಠಾಣೆಯಲ್ಲಿ ದೂರು ನೀಡಿದ್ದೆ. ನನ್ನ ತಾಯಿ ವರದಕ್ಷಿಣೆ ಕಿರುಕುಳದ ಬಗ್ಗೆ ತಂದೆಯ ವಿರುದ್ಧ ದೂರು ಕೊಟ್ಟು ಅವರು ಸುಮಾರು 7 ದಿನ ನ್ಯಾಯಾಂಗ ಬಂಧನದಲ್ಲಿ ಇದ್ದರು ಎಂದರೆ ಸರಿ. ನನ್ನ ತಂದೆಯ ವಿರುದ್ಧ ಸುಳ್ಳು ದೂರು ಕೊಟ್ಟಿದ್ದು ದಾವಾ ಆಸ್ತಿಗಳಲ್ಲಿ ವಿಭಾಗ ಕೇಳಲು ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಲೂ ನನ್ನ ತಾತನ ಹೆಸರಿನಲ್ಲಿರುವ ಕಾರಣ ನನ್ನ ತಂದೆ ವಿಭಾಗ ಮಾಡಲು ಹಕ್ಕುದಾರನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.